ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಹೌದು.

ಆ) ರಾಜ್ಯದಲ್ಲಿ ಹೆಚ್ಚುವ ಹುದ್ದೆಗಳ, ಹೊಸ ಹುದ್ದೆಗಳ ಮತ್ತು ಐಚ್ಛಿಕ ವಿಷಯಗಳನ್ನು ಮಂಜೂರಾತಿ ಮಾಡಲು ಪ್ರಸ್ತಾವನೆ (ಕುದೂರು ಸರ್ಕಾರಿ ಕಿರಿಯ ಕಾಲೇಜಿನಲ್ಲಿ ವಿಜ್ಞಾನ ವಿಷಯವನ್ನು ತೆರೆಯುವುದು ಸೇರಿ) ಆಯುಕ್ತರಿಂದ ಸರ್ಕಾರಕ್ಕೆ ಬಂದಿದೆ. ಇದನ್ನು ಸರ್ಕಾರ ಪರಿಶೀಲಿಸುತ್ತಿದೆ.

ಇ) ಪರಿಶೀಲಿಸಲಾಗುವುದು.

ಮಾಗಡಿ ತಾಲ್ಲೂಕು ಕುದೂರಿಗೆ ರಂಗ ಮಂದಿರ ಮಂಜೂರು ಮಾಡುವ ಬಗ್ಗೆ

೭೮೨ (ಗಂಟೆ) ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಶಿಕ್ಷಣ, ಯುವಜನ ಸೇವಾ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮಾಗಡಿ ತಾಲ್ಲೂಕು ಕುದೂರಿನಲ್ಲಿ ರಂಗಮಂದಿರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮಾಗಡಿ ತಾಲ್ಲೂಕು ಕುದೂರಿಗೆ ರಂಗಮಂದಿರವನ್ನು ಸರ್ಕಾರ ಮಂಜೂರು ಮಾಡುವುದೇ ?

ಇ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವಾ, ಕ್ರೀಡೆ ಕನ್ನಡ ಮತ್ತು ಸಂಸ್ಕೃತಿ ಸಚಿವರು).—

ಅ) ಇಲ್ಲ.

ಆ) ಸದ್ಯವ ನಿಯಮಾವಳಿಯ ಪ್ರಕಾರ ಕುದೂರಿಗೆ ಬಯಲು ರಂಗಮಂದಿರ ನಿರ್ಮಾಣಕ್ಕೆ ಮಂಜೂರಾತಿ ಕೊಡಲು ಅವಕಾಶ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕುದೂರು ಪಟ್ಟಣದಲ್ಲಿ ಕರ್ನಾಟಕ ಗೃಹ ಮಂಡಲಿಯು ಹುಡ್ಕೋ ಯೋಜನೆಯಡಿಯಲ್ಲಿ ವಸತಿ ಗೃಹಗಳನ್ನು ನಿರ್ಮಿಸುವ ಬಗ್ಗೆ

೭೮೩ (ಗಂಟೆ೭೭) ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಕರ್ನಾಟಕ ಗೃಹ ಮಂಡಳಿಯು ಹುಡ್ಕೋ ಯೋಜನೆಯಡಿಯಲ್ಲಿ ಕುದೂರು ಪಟ್ಟಣದಲ್ಲಿ ವಸತಿಗಳನ್ನು ನಿರ್ಮಿಸಿರುತ್ತಾರೆಯೇ ?

ಆ) ಹಾಗಿಲ್ಲದಿದ್ದಲ್ಲಿ ಇದರ ಬಗ್ಗೆ ಕಾರಣವೇನು ?

ಇ) ಸರ್ಕಾರ ಈ ಬಗ್ಗೆ ಕುದೂರಿನಲ್ಲಿ ವಸತಿಗಳನ್ನು ನಿರ್ಮಿಸಲು ಕರ್ನಾಟಕ ಗೃಹ ಮಂಡಳಿ ಮೂಲಕ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಕರ್ನಾಟಕ ಗೃಹ ಮಂಡಳಿಯು ನಗರ ಪ್ರದೇಶಗಳ ಮಿತಿಯಲ್ಲಿ ಹುಡ್ಕೋ ಸಾಲದ ನೆರವಿನೊಡನೆ ಗೃಹ ನಿರ್ಮಾಣದ ಸಮಸ್ಯೆಗಳನ್ನು ನಿಭಾಯಿಸುತ್ತದೆ. ಕುದೂರು ನಗರ ಪ್ರದೇಶವಲ್ಲದ ಕಾರಣ ಕರ್ನಾಟಕ ಗೃಹ ಮಂಡಳಿಯು ಹುಡ್ಕೋ ಸಾಲದ ನೆರವಿನೊಡನೆ ಮನೆಗಳನ್ನು ತೆಗೆದುಕೊಳ್ಳಲಾಗುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮಾಗಡಿ ಪಟ್ಟಣದ ಸಮಗ್ರ ಪಟ್ಟಣಾಭಿವೃದ್ಧಿ ಯೋಜನೆಯ ಬಗ್ಗೆ

೭೮೪ (೧೩೦೮) ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) —ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸಮಗ್ರ ಪಟ್ಟಣಾಭಿವೃದ್ಧಿ ಯೋಜನೆಯಲ್ಲಿ ಮಾಗಡಿ ಪಟ್ಟಣದಲ್ಲಿ ಎಷ್ಟು ಬಡಾವಣೆಗಳನ್ನು ಮಾಡಿದೆ ? ಮತ್ತು ಯಾವ ರೀತಿಯ ಬಡಾವಣೆಗಳು ?

ಆ) ಬಡಾವಣೆಯ ನಿರ್ಮಾಣವು ಯಾವ ಹಂತದಲ್ಲಿರುತ್ತದೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಗೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) —ಮೂರು—

ಆ) ೧. ತಿರುಮಲ ಬಡಾವಣೆಯ ಕಾರ್ಯವನ್ನು ಕರ್ನಾಟಕ ಭೂಸೇವಾ ನಿಗಮದವರಿಗೆ ವಹಿಸಲಾಗಿದ್ದು ಅಭಿವೃದ್ಧಿ ಕಾರ್ಯಗಳು ಅಂತಿಮ ಹಂತದಲ್ಲಿರುತ್ತದೆ. ರಸ್ತೆ ನಿರ್ಮಾಣ ಚರಂಡಿ ನಿರ್ಮಾಣ ಕಾರ್ಯ ಮುಗಿದಿರುತ್ತದೆ. ನೀರು ಸರಬರಾಜು ಕೊಳವೆ ಕೆಲಸವೂ ಮುಗಿದಿರುತ್ತದೆ. ಬೀದಿ ದೀಪ ಮತ್ತು ರಸ್ತೆಗೆ ಡಾಂಬರು ಕೆಲಸವನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

೨) ಫೋರ್ಟ್‌ನ ಹತ್ತಿರವಿರುವ ಬಡಾವಣೆಗೆ ಉಚ್ಚ ನ್ಯಾಯಾಲಯದ ತಡೆಯಾಜ್ಞೆಯಿರುತ್ತದೆ.

೩) ಕುಣಿಗಲ್ ರಸ್ತೆಯಲ್ಲಿ ಬರುವ ಬಡಾವಣೆಯನ್ನು ಗೃಹ ನಿರ್ಮಾಣ ಮಂಡಳಿಗೆ ಹಸ್ತಾಂತರಿಸಿದೆ.

ಸರ್ಕಾರಿ ಪ್ರೌಢಶಾಲೆಗಳನ್ನು, ಕಿರಿಯ ಕಾಲೇಜುಗಳನ್ನು ಮುಚ್ಚಿರುವ ಬಗ್ಗೆ

೭೮೫ (೧೪೫೬) ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ವಿದ್ಯಾರ್ಥಿಗಳ ಸಂಖ್ಯೆ ಇಲ್ಲದ ಕಾರಣ ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು ಮುಚ್ಚಲಾಗಿದೆ?

ಆ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಕಿರಿಯ ಕಾಲೇಜುಗಳನ್ನು ಮುಚ್ಚಲಾಗಿದೆ?

ಇ) ಸರ್ಕಾರ ಈ ಕಟ್ಟಡಗಳನ್ನು ತಾಂತ್ರಿಕ ತರಬೇತಿ ಸಂಸ್ಥೆಗಳಿಗೆ ನೀಡಲಾಗಿದೆಯೇ?